ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಗೀತ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 05/1/2020

# ಹಿರಿಯ ಸಿತಾರ್ ವಿದ್ವಾನ್ ಹಮೀದ್ ಖಾನ್ ಇನ್ನಿಲ್ಲ

ಧಾರವಾಡ: ಹಿರಿಯ ಸಿತಾರ್ ವಾದಕ ಉಸ್ತಾದ್ ಹಮೀದ್ ಖಾನ್ (63) ಶನಿವಾರ ಮಾಳಮಡ್ಡಿಯ ನಿವಾಸದಲ್ಲಿ ನಿಧನ ಹೊಂದಿದರು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಸಿತಾರ ರತ್ನ ರಹಿಮತ್‌ಖಾನ್ ಅವರ ಮೊಮ್ಮಗ ಹಾಗೂ ಅಬ್ದುಲ್ ಕರೀಂಖಾನ್ ಅವರ ಪುತ್ರ ಹಮೀದ್ ಖಾನ್



ಕರ್ನಾಟಕ ವಿಶ್ವ ವಿದ್ಯಾಲಯದ ಸಂಗೀತ ಹಾಗೂ ಲಲಿತ ಕಲಾ ಕಾಲೇಜಿನ ಉಪನ್ಯಾಸಕ ಹಾಗೂ ಪ್ರಾಚಾರ್ಯರಾಗಿ ನಿವೃತ್ತರಾಗಿದ್ದರು.

ತಂದೆ ಅಬ್ದುಲ್ ಕರೀಂಖಾನ್ ಬಳಿಯೇ ಸಿತಾರ ವಾದನದ ಅಭ್ಯಾಸ ನಡೆಸಿದ ಹಮೀದ್ ಖಾನ್ ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದರು. ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ಅಜ್ಜ ಸ್ಥಾಪಿಸಿದ ಭಾರತೀಯ ಸಂಗೀತ ವಿದ್ಯಾಲಯವನ್ನು ಸಮರ್ಥವಾಗಿ ಮುನ್ನಡೆಸುವ ಮೂಲಕ ಅನೇಕರಿಗೆ ಸಿತಾರ ವಾದನ ತರಬೇತಿ ನೀಡಿದ್ದರು. ಸ್ಪಿಕ್ ಮೆಕೆ ಗೌರವ, ರಾಜೀವ ಗಾಂಧಿ ಎಕ್ಸಲೆನ್ಸ್, ಅಜಂತಾ ರಾಷ್ಟ್ರೀಯ ಪ್ರಶಸ್ತಿ ಸೇರಿ ಹತ್ತು ಹಲವು ಪ್ರಶಸ್ತಿಗಳು ಲಭಿಸಿವೆ. ಅಜ್ಜ ಹಾಗೂ ತಂದೆ ಸ್ಮರಣಾರ್ಥ ನಗರದಲ್ಲಿ ಅಹೋರಾತ್ರಿ ಸಂಗೀತ ಕಾರ್ಯಕ್ರಮ ಆಯೋಜಿಸುತ್ತಿದ್ದರು.